**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

**ಎಸ್.ಸಿ. 21/2019**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಪ್ರಕಾಶ | *ಪ್ರಮಾಣ ಮಾಡಿದ ದಿನಾಂಕಃ* | |
| ತಂದೆ ಹೆಸರು | ಃ ಸ್ಯಾಮುವೆಲ್ | **21.02.2023** | |
| ವಯಸ್ಸು | ಃ 51 ವರ್ಷ | | |
| ವೃತ್ತಿ | ಃ ಅಟೆಂಡರ್, ಮಿಷನ್ ಆಸ್ಪತ್ರೆ | ಪಿಡಬ್ಲ್ಯೂ ಃ | 10 |
| ವಾಸ ಸ್ಥಳ | ಃ ಮೈಸೂರು | ಸಿಡಬ್ಲ್ಯೂ ಃ | 14 |

*ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ*

ನ್ಯಾಯಾಲಯದೆದುರು ಹಾಜರಿರುವ ಆರೋಪಿಯನ್ನು ನಾನು ನೋಡಿದ್ದೇನೆ. ಆರೋಪಿತಳನ್ನು ನಮ್ಮ ಮನೆಯ ಹತ್ತಿರ ನೋಡಿದ್ದೇನೆ. ಮಿಷನ್ ಆಸ್ಪತ್ರೆಯಲ್ಲಿ 6-7 ವರ್ಷಗಳ ಹಿಂದೆ ಪವಿತ್ರಾಕುಮಾರಿ ಸತ್ತಾಗ ನೋಡಿದ್ದೇನೆ. ನಮ್ಮ ಮತ್ತು ಆರೋಪಿತಳ ಮನೆ ಒಂದೇ ಬೀದಿಯಲ್ಲಿ ಇರುತ್ತವೆ. ಮೃತ ಪವಿತ್ರಾಕುಮಾರಿ ಮನೆ ಹಾಗೂ ಆರೋಪಿ ಮನೆ ಎದುರು ಬದುರು ಇವೆ. ಮೃತ ಪವಿತ್ರಾಕುಮಾರಿ ಮತ್ತು ಆರೋಪಿ ಮದ್ಯೆ ಹಣದ ವಿಚಾರದಲ್ಲಿ ಗಲಾಟೆ ಆದ ವಿಷಯ ನನಗೆ ಗೊತ್ತಿಲ್ಲ. ಆ ಬಗ್ಗೆ ನಾನು ಅವರಿಗೆ ಸಮಾಧಾನ ಮಾಡಿಲ್ಲ. ಪವಿತ್ರಾಕುಮಾರಿ ಅವರು ವಿಷ ಸೇವನೆ ಮಾಡಿ ಸತ್ತಿದ್ದಾರೆ ಅಂತ ಗೊತ್ತಾಯಿತು. ಅವರು ಯಾವ ಕಾರಣಕ್ಕಾಗಿ ವಿಷ ಸೇವಿಸಿದ್ದರು ಎಂದು ಗೊತ್ತಿಲ್ಲ. ಈ ಬಗ್ಗೆ ಪೊಲೀಸರು ನನ್ನ ಹೇಳಿಕೆ ಪಡೆದಿಲ್ಲ. ಈಗ ತೋರಿಸಿದ ಒಂದು ದಾಖಲೆ ಮೇಲೆ ನನ್ನ ರುಜು ಇರುತ್ತದೆ. ಸದರಿ ದಾಖಲೆ ಸಾಕ್ಷಿ ಮುಚ್ಚಳಿಕೆ ಆಗಿದ್ದು, ಅದಕ್ಕೆ ಪೊಲೀಸರು ಸಹಿ ತೆಗೆದುಕೊಂಡಿದ್ದಾರೆ. ಸದರಿ ಮುಚ್ಚಳಿಕೆಯನ್ನು ನಿಪಿ-7 ಎಂದು, ಸಾಕ್ಷಿ ರುಜುವನ್ನು ನಿಪಿ-7(ಎ) ಎಂದು ಗುರುತಿಸಿದೆ. ಸದರಿ ಮುಚ್ಚಳಿಕೆ ಮೇಲೆ ಸಹಿಯನ್ನು ಯಾವ ಪೊಲೀಸರು ತೆಗೆದುಕೊಂಡರು ಅಂತ ನನಗೆ ಗೊತ್ತಿಲ್ಲ. ಪೊಲೀಸರು ಅದೇ ದಿನ ನಮ್ಮ ಮನೆಯ ಹತ್ತಿರ ಬಂದು ನನ್ನ ಆಧಾರ ಕಾರ್ಡ್ ಪ್ರತಿ ಪಡೆದುಕೊಂಡಿದ್ದಾರೆ. ಯಾವ ಕಾರಣಕ್ಕೆ

ತೆಗೆದುಕೊಂಡರು ಅಂತ ಗೊತ್ತಿಲ್ಲ. ಈಗ ತೋರಿಸಿದ ಆಧಾರ ಕಾರ್ಡ್ ಪ್ರತಿ ನನ್ನದೇ ಇರುತ್ತದೆ. ಅದನ್ನು ನಿಪಿ-8 ಎಂದು ಗುರುತಿಸಿದೆ.

*(ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ಅನುಮತಿ ಕೇಳುತ್ತಾರೆ. ಸಾಕ್ಷಿಯು ಪೋಲೀಸರ ಎದುರಿನ ಹೇಳಿಕೆಯ ಪ್ರತಿಕೂಲವಾಗಿ ನುಡಿಯುತ್ತಿರುವುದರಿಂದ ಅನುಮತಿ ನೀಡಲಾಯಿತು.)*

*ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-*

2. ಆರೋಪಿಯು ಪವಿತ್ರಾಕುಮಾರಿ ಜೊತೆ ಸಾಲದ, ಬಡ್ಡಿ ಮತ್ತು ಅಸಲನ್ನು ತುಂಬುವ ವಿಚಾರದಲ್ಲಿ ಆಗಾಗ್ಗೆ ಗಲಾಟೆ ಮಾಡುತ್ತಿದ್ದು, ಅದನ್ನು ಕೊಡಲು ಆಗದಿದ್ದರೆ ಎಲ್ಲಿಯಾದರೂ ಹೋಗಿ ಸಾಯಿ ಅಂತ ಕೂಗಾಡುತ್ತಿದ್ದುದ್ದನ್ನು ನಾನು ನೋಡಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 07.06.2015ರಂದು ಸಂಜೆ 6 ಗಂಟೆ ಸಮಯದಲ್ಲಿ ಆರೋಪಿಯು ಮೃತಳಿಗೆ ಅಸಲು, ಬಡ್ಡಿ ಸೇರಿ ರೂ.3 ಲಕ್ಷ ಈಗಲೇ ಕೊಡು ಅಂತ ಗಲಾಟೆ ಮಾಡಿದ್ದಳು ಮತ್ತು ಈಗ ಎಲ್ಲಿಂತ ತರಬೇಕು ಅಂತ ಅಂದಾಗ ಆರೋಪಿ ಕೆಟ್ಟ ಭಾಷೆಯಲ್ಲಿ ಬೈಯುತ್ತಿದ್ದಳು ಮತ್ತು ನಾನು ಅವರಿಗೆ ಸಮಾಧಾನ ಮಾಡಿ ಕಳುಹಿಸಿದ್ದೆ ಎಂದರೆ ಸರಿಯಲ್ಲ. ದಿನಾಂಕ 11.06.2015ರಂದು ಪವಿತ್ರಾ ಕುಮಾರಿ ಅವಮಾನ ತಾಳಲಾರದೇ ತನ್ನ ಮನೆಯಲ್ಲಿದ್ದ ಜಿರಲೆ ಮತ್ತು ತಿಗಣಿ ಸಾಯಿಸಲು ಉಪಯೋಗಿಸುವ ವಿಷವನ್ನು ಸೇವಿಸಿ ಮೃತಪಟ್ಟಿಳು ಎನ್ನುವುದು ಗೊತ್ತಿಲ್ಲ. ಈ ರೀತಿಯಾಗಿ ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ "ಶ್ರೀಮತಿ ಪವಿತ್ರಾಕುಮಾರಿಯವರು ನಮ್ಮ ಏರಿಯಾದ .......................... ತಮ್ಮ ಮನೆಯಲ್ಲಿದ್ದ ಜಿರಲೆ ಮತ್ತು ತಿಗಣೆ ಸಾಯಿಸುವ ಔಷಧವನ್ನು ಸೇವಿಸಿ ಮೃತಪಟ್ಟಿರುತ್ತಾಳೆ" ಅಂತ ಈಗ ಓದಿ ಹೇಳಿದ ನಿಪಿ-9ರಂತೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿಪಿ-7ರ ಪ್ರಕಾರ ನಾನು ಸಾಕ್ಷಿ ಮುಚ್ಚಳಿಕೆ ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ಸಾಕ್ಷಿ ಕೊಡುವಾಗ ನಿಪಿ-8ರ ದಾಖಲೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿ ಜೊತೆ ಚೆನ್ನಾಗಿದ್ದೇನೆ. ಆ ಕಾರಣದಿಂದ ನನಗೆ ಈ ಪ್ರಕರಣದ ಬಗ್ಗೆ ಗೊತ್ತಿದ್ದರೂ ಗೊತ್ತಿಲ್ಲ ಅಂತ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರಾದ ಶ್ರೀ ಎ.ಜಿ.ಎಸ್.ರವರಿಂದಃ- ಇಲ್ಲ**

**ಮರು ವಿಚಾರಣೆಃ- - ಇಲ್ಲ -**

*ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.*

**ಓ ಹೇ ಕೇ ಸ ಇ ಎ ಒ.,**

**21.02.2023.**
**[ ಜಿ.ಎಸ್. ಸಂಗ್ರೇಶಿ ]**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಮೈಸೂರು.**